







## ರಾಜ್ಯ ವಾರ್ತೆ - ದಾವಣಗೆರೆ

Select District News

Search

Friday August 19 2011 10:25 IST

### ಸಿದ್ಧಗಂಗಾ ಶಾಲಾ ಮಕ್ಕಳಿಂದ ಉಪವಾಸ




ದಾವಣಗೆರೆ: ಅಣ್ಣಾ ಹಜಾರೆಗೆ ಬೆಂಬಲ ನೀಡಿ ಸಂಘ ಸಂಸೆಗಳು, ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ಮುಂದುವರೆಸಿದ್ದರೆ ಸಿದ್ಧಗಂಗಾ ವಿದ್ಯಾಸಂಸ್ಥೆ ವಿದ್ಯಾರ್ಥಿಗಳು, ಶಿಕ್ಷಕರು ಬೆಳಗ್ಗೆ ೮.೩೦ ರಿಂದ ಸಂಜೆ ೫ರ ತನಕ ಉಪವಾಸ ಸತ್ಯಾಗ್ರಹ ನಡೆಸಿ ಬೆಂಬವ ವ್ಯಕ್ತಪಡಿಸಿದರು. ಬೆಳಗ್ಗೆಯಿಂದಲೇ ಶಾಲಾವರಣದಲ್ಲಿ ಹಾಕಲಾಗಿದ್ದ ಶಾಮಿಯಾನದಲ್ಲಿ ಜಮಾವಣೆಗೊಂಡ ವಿದ್ಯಾರ್ಥಿಗಳು ಅಣ್ಣಾ ಹಜಾರೆಗೆ ಜಯ ಸಿಗಬೇಕು. ದೇಶದಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಆಗಲೇಬೇಕು ಎಂದು ಅಭಿಪ್ರಾಯ ಪಟ್ಟರು.

ಬಲವಾದ ಕಾನೂನು ಬೇಕು: ಮಾಧ್ಯಮದೊಂದಿಗೆ ಮಾತನಾಡಿದ ವಿದ್ಯಾರ್ಥಿನಿ ಶೀತಲ್, ಇಂದು ದೇಶದಲ್ಲಿ ಭ್ರಷ್ಟಾಚಾರ ಮಾಮೂಲು ಎಂಬಂತಾಗಿದೆ. ಇದು ಹೀಗೆ ಮುಂದುವರಿದರೆ ಮುಂದಿನ ದಿನಗಳಲ್ಲಿ ಅನ್ಯಾಯ, ಅಕ್ರಮ ಹೆಚ್ಚಾಗುತ್ತವೆ ಇದನ್ನು ನಿಯಂತ್ರಿಸಲು ಬಲವಾದ ಕಾನೂನು ಬೇಕು ಎಂದರು.


ಅಣ್ಣಾ ಹಜಾರೆ ಇಳಿ ವಯಸ್ಸಿನಲ್ಲಿಯೂ ದೇಶದ ಬಗ್ಗೆ ಚಿಂತಿಸುತ್ತಿದ್ದಾರೆ. ಹೀಗಿರುವಾಗ ಮುಂದಿನ ಪ್ರಜೆಗಳಾದ ನಾವು ಅವರಿಗೊಂದು ಬೆಂಬಲ ನೀಡುವ ಸಲುವಾಗಿ ಉಪವಾಸ ಕುಳಿತಿದ್ದೇವೆ. ಅಣ್ಣಾರ ಬೆಂಬಲಕ್ಕೆ ನಾವೆಲ್ಲಾ ಇದ್ದೇವೆ ಎಂಬುದನ್ನು ತಿಳಿಸುವ ಸಲುವಾಗಿಯೇ ಇಂದು ನಾವು ತರಗತಿ ತೊರೆದು, ಉಪವಾಸ ಕೈಗೊಂಡಿದ್ದೇವೆ. ರಾಜಕಾರಣಿಗಳು ಅರಿಯಬೇಕು ಎಂದರು.

ನಾಯಕರು ಸಿಕ್ಕಿದ್ದಾರೆ: ಇಂದಿನ ರಾಜಕಾರಣಿಗಳು ಮಾಡುತ್ತಿರುವ ಭ್ರಷ್ಟಾಚಾರ ಮುಂದೆ ಇರಬಾರದು. ಇದಕ್ಕೆ ಕಡಿವಾಣ ಹಾಕಲು ನಾಯಕರು ಬೇಕಾಗಿದ್ದರು. ಇದೀಗ ನಾಯಕರು ಸಿಕ್ಕಿದ್ದಾರೆ. ಅವರ ಮೇಲೆ ಭರವಸೆ ಇಟ್ಟಿದ್ದೇವೆ ಎಂದು ಹೇಳಿದರು. ಸಂಸ್ಥೆಯ ಕಾರ್ಯದರ್ಶಿ ಶಿವಣ್ಣ, ಮುಖ್ಯೋಪಾಧ್ಯಾಯನಿ ಜಸ್ಟಿನ್ ಡಿಸೋಜ, ನಿರ್ದೇಶಕರಾದ ಡಾ. ಜಯಂತ್, ಹೇಮಂತ್, ೮೦ ಜನ ಶಿಕ್ಷಕರು, ಸುಮಾರು ೭೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಉಪಾಸದಲ್ಲಿ ಭಾಗಿಯಾಗಿದ್ದರು. ಇತ್ತ ಲಲಿತ ಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ನಗರದ ಗುಂಡಿ ವೃತ್ತದಲ್ಲಿ ಭ್ರಷ್ಟಾಚಾರ ವಿರೋಧಿಸುವ ವ್ಯಂಗ್ಯ ಚಿತ್ರ ರಚಿಸುವ ಮೂಲಕ ಅಣ್ಣಾಗೆ ಬೆಂಬಲ ಸೂಚಿಸಿದರು.

del.icio.us digg newsVine
Send this page to your friend

ಇನ್ನಷ್ಟು ಸುದ್ದಿಗಳು

.ಅಣ್ಣಾ ಹಜಾರೆಗೆ ಜೈಕಾರ: ಕೇಂದ್ರ ಸರ್ಕಾರಕ್ಕೆ ಧಿಕ್ಕಾರ (Aug 19, 2011)
.ಅಣ್ಣಾ ಬೆಂಬಲಕ್ಕೆ ಸಾಗರೋಪಾದಿಯಲ್ಲಿ ಹರಿದು ಬಂದ ವಿದ್ಯಾರ್ಥಿ ಸಮೂಹ (Aug 19, 2011)
.ಸರದಿ ಉಪವಾಸಕ್ಕೆ ಸರ್ವರ ಬೆಂಬಲ (Aug 19, 2011)
.ಫೋಟೋಗ್ರಫಿ ತಂತ್ರಜ್ಞಾನಕ್ಕೆ ತರಬೇತಿ ಅಗತ್ಯ (Aug 19, 2011)
.ಕುಖ್ಯಾತ ಕಳ್ಳನ ಬಂಧನ (Aug 19, 2011)
.ರೈತ ನಿಂದನೆ: ಹಸಿರು ಸೇನೆ ಪ್ರತಿಭಟನೆ (Aug 19, 2011)
.ಜಂಟಿ ಕಾರ್ಯಾಚರಣೆ: ಅಕ್ರಮ ಮರಳು ವಶ (Aug 19, 2011)
.ಮಹಿಳೆಯರ ಸ್ಥಿತಿ ಕಳವಳಕಾರಿ (Aug 19, 2011)
.ಶಿಕ್ಷಣಕ್ಕೆ ಕೋಟ್ಯಂತರ ರು. ಅನುದಾನ (Aug 19, 2011)
.ಯುವ ಜನರ ಜಾಥಾ (Aug 19, 2011)
.ಪ್ರತಿಭಾ ಪುರಸ್ಕಾರ (Aug 19, 2011)
.ಶಿವಯೋಗಿ ಹಾಲಸ್ವಾಮಿ ಮಠ ರಸ್ತೆ ಒತ್ತುವರಿ (Aug 19, 2011)




[X]





- ಪದ ಪದರ
- ಇವರು ನಮ್ಮ ರೈತ
- ಕೇಳ್ರಪ್ಪೋ ಕೇಳಿ
- ಹಿರಿಯರ ಹಾದಿ
- ಟ್ವಿಭಾಷಿತ
- ವಕ್ರತುಂಡೋಕ್ತಿ
- ತೂಕದ ಮಾತು
- ಕಿರುನಗೆ
- ಸುಪ್ರಭತಾ
- ಘ್ನಾನಪೀಠ
- ನೇರ ಮಾತು
- ಅನ್ನಪೂರ್ಣೆ

.ಪುಸ್ತಕ ಓದುವುದರತ್ತ ಗಮನ ಹರಿಸಿ (Aug 19, 2011)
.ಗೋಲ್ಡನ್ ಪಬ್ಲಿಕ್ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ (Aug 19, 2011)
.ಇಂದು ಜೋಗಯ್ಯ ಮೆರವಣಿಗೆ (ಸಿಟಿ ಸುದ್ದಿ) (Aug 19, 2011)
.ಯಡಿಯೂರಪ್ಪ ಹೇಳಿಕೆ ಹಾಸ್ಯಾಸ್ಪದ (ಸುದ್ದಿ ಸಂಕ್ಷೇಪ) (Aug 19, 2011)

Terms & Conditions apply
ICICI Bank NRI Services

